ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	:	ಶ್ರೀ ಎನ್.ಎಸ್.ಬೋಸರಾಜು
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	624(755)
ಉತ್ತರಿಸಬೇಕಾದ ಸಚಿವರು	:	ಮಾನ್ಯ ಕೃಷಿ ಸಚಿವರು
ಉತ್ತರಿಸಬೇಕಾದ ದಿನಾಂಕ	:	17-12-2018

ಅ.	ರಾಯಚೂರುನಲ್ಲಿರುವ ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;	ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ಸರ್ಕಾರವು 2018-19ನೇ ಆರ್ಥಿಕ ಸಾಲಿನಲ್ಲಿ ಕೃಷಿ ಸಂಶೋಧನೆಗಾಗಿ ರೂ. 10.00 ಕೋಟಿಗಳನ್ನು ಮತ್ತು ಕೃಷಿ ಶಿಕ್ಷಣಕ್ಕಾಗಿ ರೂ. 12.94 ಕೋಟಿಗಳನ್ನು ಹಂಚಿಕೆ ಮಾಡಲಾಗಿದೆ.
ಆ.	ತುಂಗಾಭದ್ರಾ ಅಚ್ಚು ಕಟ್ಟು ಪ್ರದೇಶಗಳಲ್ಲಿ ಮಳೆ ಪ್ರಮಾಣ ಕಡಿಮೆ ಇರುವುದರಿಂದ ವಿವಿಧ ಬೆಳೆಗಳನ್ನು ಬೆಳೆಯಲು ಕೃಷಿ ವಿಶ್ವವಿದ್ಯಾಲಯಗಳಿಂದ ರಾಯಚೂರು ಜಿಲ್ಲೆಯ ರೈತರುಗಳಿಗೆ ನೀಡಿರುವ ಸಲಹೆಗಳೇನು; ಇಲ್ಲಿಯವರೆಗೂ ಯಾವ ಯಾವ ಬೆಳೆಗಳಿಗೆ ಪರಿಶೋಧನೆ ಮಾಡಲಾಗಿದೆ?	<u>ರಾಯಚೂರು ಕೃಷಿ ವಿಶ್ವವಿದ್ಯಾಲಯದಿಂದ ರೈತರಿಗೆ ಈ ಕೆಳಕಂಡ ಸಲಹೆಗಳನ್ನು ನೀಡಲಾಗಿದೆ:-</u> ➢ ಭತ್ತದಲ್ಲಿ ನಾಟಿ ಮಾಡುವ ಪದ್ಧತಿಯ ಬದಲಾಗಿ ಕೂರಿಗೆ ಭತ್ತ ಪದ್ಧತಿಯನ್ನು ಅಳವಡಿಸುವುದು. ಇದರಿಂದ ಶೇ. 30-35 ರಷ್ಟು ನೀರನ್ನು ಉಳಿತಾಯ ಮಾಡಬಹುದು. ➢ ಭತ್ತದ ನಂತರ ಭತ್ತವನ್ನು ಬಿತ್ತದೆ, ಭತ್ತದ ನಂತರ ಭೂಮಿಯ ಹಸಿಯನ್ನು ಬಳಸಿಕೊಂಡು, ಎಳ್ಳು ಅಥವಾ ಸಾಸಿವೆಯನ್ನು ಬೆಳೆಯುವುದು ಸೂಕ್ತ. ನೀರು ಲಭ್ಯವಿದ್ದ ಸಂದರ್ಭದಲ್ಲಿ, ತರಕಾರಿ ಬೆಳೆಗಳಾದ ಟ್ಯೋಮಾಟೊ ಅಥವಾ ಹೀರೆಕಾಯಿಯನ್ನು ಬೆಳೆಯುವುದು ಲಾಭದಾಯಕ. ➢ ಬೇಸಿಗೆಯಲ್ಲಿ ನೀರು ಕೊಡುವ ಸಾಧ್ಯತೆಯಿದ್ದಲ್ಲಿ, ಭತ್ತದ ನಂತರ ಭತ್ತ ಬೆಳೆಯುವ ಬದಲು, ಬೇಸಿಗೆಯಲ್ಲಿ ಬಿಸಿಲನ್ನು ಮತ್ತು ನೀರಿನ ಕೊರತೆಯನ್ನು ತಡೆಯಬಹುದಾದ ಬಗ್ಗೆ ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಮಾಡಿ ಶಿಫಾರಸ್ಸು ಮಾಡಿದಂತಹ ಮೆಕ್ಕೆಜೋಳದ ತಳಿಯಾದ ಆರ್.ಸಿ.ಆರ್.ಎಮ್.ಹೆಚ್-2 ಬೆಳೆಯುವುದು. ➢ ತೊಗರಿಯನ್ನು ನೇರವಾಗಿ ಬಿತ್ತುವ ಪದ್ಧತಿಯ ಬದಲಾಗಿ, ತೊಗರಿಯ ಸಸಿಯನ್ನು ತಯಾರು ಮಾಡಿಕೊಂಡು 25-35 ದಿನದಲ್ಲಿ ನಾಟಿ ಮಾಡುವುದರಿಂದ ಅಧಿಕ ಇಳುವರಿಯನ್ನು ಪಡೆಯಬಹುದು. ➢ ಭೂಮಿಯಲ್ಲಿನ ಹಸಿಯು ಕಳೆ ಉಪಯೋಗಿಸುವುದನ್ನು ತಡೆಗಟ್ಟಲು, ರಾಯಚೂರು ಜಿಲ್ಲೆಯಲ್ಲಿ ಬೆಳೆಯುವ ಎಲ್ಲಾ ಬೆಳೆಗಳಿಗೆ ಸೂಕ್ತ ಕಳೆನಾಶಕವನ್ನು ಸಂಶೋಧನೆ ಮಾಡಿ ಶಿಫಾರಸ್ಸು ಮಾಡಲಾಗಿದೆ.

		➢ ನೀರಿನ ಕೊರತೆಯ ಭಾದೆಯನ್ನು ತಡೆದುಕೊಳ್ಳಲು ಜೋಳಕ್ಕೆ ಪ್ರತಿ ಕಿ.ಗ್ರಾಂ. ಬೀಜವನ್ನು 1.5 ಲೀ. ನೀರಿನಲ್ಲಿ 30 ಗ್ರಾಂ. ಕ್ಯಾಲ್ಸಿಯಂ ಕ್ಲೋರೈಡ್ ಬೆರೆಸಿದ ಅಥವಾ ಗೋಮೂತ್ರ (ಶೇ. 25) ಬೆರೆಸಿದ ದ್ರಾವಣದಲ್ಲಿ 8 ಗಂಟೆಗಳ ಕಾಲ ನೆನೆಸಿ ನೆರಳಿನಲ್ಲಿ ಒಣಗಿಸಿ ಬಿತ್ತುವುದರಿಂದ ಬೀಜ ಮೊಳಕೆ ಹಾಗೂ ಸಸಿಗಳ ಬೆಳವಣಿಗೆ ಸುಧಾರಿಸುವುದು. ಇದೇ ರೀತಿ ಕಡಲೆಯಲ್ಲಿ ಬರ ನೀರೋಧಕತೆ ಹೆಚ್ಚಿಸಲು ಬೀಜವನ್ನು ಶೇ. 2ರ ಕ್ಯಾಲ್ಸಿಯಂ ಕ್ಲೋರೈಡ್ ದ್ರಾವಣದಲ್ಲಿ 30 ನಿಮಿಷ ಅಥವಾ ಶೇ. 25ರ ಗೋಮೂತ್ರದಲ್ಲಿ 8 ಗಂಟೆಗಳ ಕಾಲ ನೆನೆಸಿ ಬಿತ್ತುವುದು. ➢ ಹತ್ತಿ ಮತ್ತು ತೊಗರಿಯಲ್ಲಿ ಪ್ರತಿ ಸಾಲಿಗೆ ನೀರು ಮಾಡುವ ಬದಲಾಗಿ ಸಾಲು ಬಿಟ್ಟು ಸಾಲು ನೀರು ಹಾಯಿಸುವುದರಿಂದ ಇಳುವರಿಯಲ್ಲಿ ಕಡಿಮೆಯಾಗದೆ ಶೇ. 30–35 ರಷ್ಟು ನೀರನ್ನು ಉಳಿತಾಯ ಮಾಡಬಹುದು. ➢ ಕಡಲೆ ಮತ್ತು ಕುಸುಬೆಯಲ್ಲಿ ಅಗಲ ಏರು ಮಡಿ ಸಾಲು ನೀರಾವರಿ ಪದ್ಧತಿ ಅನುಸರಿಸುವುದು. ➢ ಬಂದ ಮಳೆ ನೀರನ್ನು ಭೂಮಿಯಲ್ಲಿ ಹಿಡಿದಿಟ್ಟು ಕೊಳ್ಳಲು ನೀರು ಸಂರಕ್ಷಣೆಯನ್ನು ಪದ್ಧತಿಯನ್ನು ಶಿಫಾರಸ್ಸು ಮಾಡಲಾಗಿದೆ. ➢ ತೊಗರಿಯಲ್ಲಿ ನೀರಿನ ಕೊರತೆಯಿಂದ ಹೂ ಉದುರುವುದನ್ನು ತಡೆಗಟ್ಟಲು "ಪಲ್ಸ್ ಮ್ಯಾಜಿಕ್" 10 ಗ್ರಾಂ/ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸುವುದು. ➢ ಬೆಳೆಗಳಲ್ಲಿ ಹನಿ ನೀರಾವರಿ ಬಳಕೆ ಮಾಡುವುದರಿಂದ ನೀರು ಉಳಿಸುವುದಲ್ಲದೆ ಇಳುವರಿಯಲ್ಲಿ ಹೆಚ್ಚಿಸಬಹುದು. ಸಮಗ್ರ ಬೆಳೆ ಪದ್ಧತಿ ಅನುಸರಿಸುವುದು. ಕೃಷಿವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನಲ್ಲಿ ಈ ಪ್ರದೇಶಕ್ಕೆ (ರಾಯಚೂರು ಜಿಲ್ಲೆಗೆ) ಸೂಕ್ತವಾದ ಸಮಗ್ರ ಬೆಳೆ ಪದ್ಧತಿಯನ್ನು ಸಂಶೋಧನೆ ಮಾಡಿ ಶಿಫಾರಸ್ಸು ಮಾಡಲಾಗಿದೆ. ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ವ್ಯಾಪ್ತಿಯಲ್ಲಿ ಬರುವ ಬೆಳೆಗಳಾದ ಭತ್ತ, ಮೆಕ್ಕಜೋಳ, ಜೋಳ, ಎಳ್ಳು, ಸಾಸಿವೆ, ತೊಗರಿ, ಕಡಲೆ, ಹತ್ತಿ ಮತ್ತು ಕುಸುಬೆಯ ಬೆಳೆಗಳಲ್ಲಿ ಪರಿಶೋಧನೆ ಮಾಡಿ ಶಿಫಾರಸ್ಸು ಮಾಡಲಾಗಿದೆ.

ಸಂಖ್ಯೆ: ಕೃಇ 51 ಕೃವಿರಾ 2018 (56041)

(ಎನ್.ಹೆಚ್. ಶಿವಶಂಕರ ರೆಡ್ಡಿ)
ಕೃಷಿ ಸಚಿವರು